# ಎಟಿಎಂ ಭದ್ರತೆಗೆ ಹೊಸ ಸಾಧನ

## ■ ಸೆಕ್ಯುರೆನ್ಸ್ ಸಂಸ್ಥೆಯಿಂದ 24x7 ನಿಗಾ ವ್ಯವಸ್ಥೆ ■ ಅತಿ ಕಡಿಮೆ ಬೆಲೆಗೆ ಲಭ್ಯ

**ಬೆಂಗಳೂರು:** ಇತ್ತೀಚಿನ ದಿನಗಳಲ್ಲಿ ಎಟಿಎಂಗಳಲ್ಲಿ ನಡೆಯುತ್ತಿರುವ ರಾಬರಿ ಹಾಗೂ ಕೇಂದ್ರದೊಳಗೆ ಗ್ರಾಹಕರ ಭದ್ರತೆ ವಿಚಾರವಾಗಿ ಸಾಕಷ್ಟು ವಾದ- ಪ್ರತಿವಾದಗಳು ಕೇಳಿಬರುತ್ತಿವೆ. ಭದ್ರತಾ ಸಿಬ್ಬಂದಿ ನೇಮಿಸದ, ಸಿಸಿಟಿವಿ ಅಳವಡಿಸದಿರುವ ಎಟಿಎಂ ಕೇಂದ್ರಗಳನ್ನು ಮುಚ್ಚಲು ಸಹ ಬೆಂಗಳೂರು ನಗರ ಪೊಲೀಸರು ಮುಂದಾಗಿದ್ದರು. ಈ ಹಿನ್ನೆಲೆಯಲ್ಲಿ ಅತಿ ಕಡಿಮೆ ಬೆಲೆಯಲ್ಲಿ ಎಟಿಎಂಗಳಿಗೆ ಅತ್ಯಾಧುನಿಕ ಭದ್ರತೆ ಕಲ್ಪಿಸುವ ಸಾಧನವನ್ನು ಮುಂಬೈ ಮೂಲದ ಸೆಕ್ಯುರೆನ್ಸ್ ಸಿಸ್ಟಮ್ಸ್ ಸಂಸ್ಥೆ ರೂಪಿಸಿದೆ. ಇದಕ್ಕೆ ಆಕ್ಟೀವ್ ಡೆಟೆರೆನ್ಸ್ ಎಂಬ ಹೆಸರನ್ನೂ ಕೊಟ್ಟಿದೆ.

ಬೆಂಗಳೂರಿನಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ಆರ್. ಉಡುಪ ಈ ಸಾಧನ ಹಾಗೂ ವ್ಯವಸ್ಥೆಗಳ ಬಗ್ಗೆ ವಿವರಣೆ ನೀಡಿದರು.

ಎಟಿಎಂ ಕೇಂದ್ರದಲ್ಲಿ ಸಿಸಿ ಟಿವಿಗಳನ್ನು ಅಳವಡಿಸಿದರೆ ಕೇವಲ ಅಪರಾಧಗಳ ದೃಶ್ಯಗಳು ಮಾತ್ರ ದಾಖಲಾಗುತ್ತದೆ. ಆದರೆ ಸೆಕ್ಯುರೆನ್ಸ್‌ನ ವ್ಯವಸ್ಥೆಯಲ್ಲಿ ಅಪರಾಧ ನಡೆಯುತ್ತಿರುವಾಗಲೇ ಆ ವ್ಯಕ್ತಿಯನ್ನು ಬೆದರಿಸಿ ಓಡಿಸುವುದಷ್ಟೇ ಅಲ್ಲ, ತಕ್ಷಣವೇ ಸ್ಥಳೀಯ ಪೊಲೀಸರಿಗೆ ಮಾಹಿತಿ ರವಾನಿಸಿ ಆತನನ್ನು ಬಂಧಿಸಬಹುದು ಎಂದು ಅವರು ತಿಳಿಸಿದರು.

**ಖರ್ಚು ಎಷ್ಟು?:** ಇಂಥ ಹೈಟೆಕ್ ವ್ಯವಸ್ಥೆಗಾಗಿ ಬ್ಯಾಂಕ್‌ಗಳು ಮಾಸಿಕವಾಗಿ 12 ಸಾವಿರ ರೂ. ಶುಲ್ಕ ಭರಿಸಬೇಕಾಗುತ್ತದೆ. ಒಂದು ಯಂತ್ರ ಅಥವಾ ನಾಲ್ಕೈದು ಯಂತ್ರಗಳಿರುವ ಒಂದು ಕೋಣೆಯನ್ನು ಒಂದು ಯೂನಿಟ್ ಎಂದು ಪರಿಗಣಿಸಿ, 12 ಸಾವಿರ ರೂ. ಶುಲ್ಕ ವಿಧಿಸಲಾಗುತ್ತದೆ ಎಂದು ಸುನಿಲ್ ಎಂ. ಉಡುಪ ಸ್ಪಷ್ಟಪಡಿಸಿದರು. ಎಟಿಎಂ ಕೇಂದ್ರಗಳ ಕಾವಲಿಗಾಗಿ ಮೂರು ಶಿಫ್ಟ್‌ನಲ್ಲಿ ಕೆಲಸ ಮಾಡಲು ಮೂವರು ಸಿಬ್ಬಂದಿಗೆ ಕನಿಷ್ಠವೆಂದರೂ ಬ್ಯಾಂಕ್‌ಗಳು ಪ್ರತಿ ತಿಂಗಳು 30ರಿಂದ 33 ಸಾವಿರ ರೂ. ಖರ್ಚು ಬರುತ್ತದೆ. ಇದಕ್ಕೆ ಹೋಲಿಸಿದರೆ ಈ ಮೊತ್ತ ತುಂಬಾ ಕಡಿಮೆ ಎಂದು ಅವರು ಅಭಿಪ್ರಾಯಪಟ್ಟರು.

**ಬ್ರಿಟನ್, ಅಮೆರಿಕದಲ್ಲಿ ಈ ವ್ಯವಸ್ಥೆ:** ಬ್ರಿಟನ್ ಮತ್ತು ಅಮೆರಿಕದಲ್ಲಿ ಈ ತಂತ್ರಜ್ಞಾನ ಬಳಕೆಯಲ್ಲಿದೆ. ಆದರೆ ಅಲ್ಲಿ ಸ್ಥಿರ ದೂರವಾಣಿ ಜಾಲದ ಮೂಲಕ ಈ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತದೆ. ಆದರೆ ಭಾರತದಲ್ಲಿ ಸ್ಥಿರ ದೂರವಾಣಿ ಜಾಲ ನಂಬಿಕೊಳ್ಳುವುದು ಕಷ್ಟ. ಹೀಗಾಗಿ ರಿಲಯನ್ಸ್ ಮತ್ತು ಟಾಟಾ/ಸಂಸ್ಥೆಗಳ ವೈರ್‌ಲೆಸ್ ಸಂಪರ್ಕವನ್ನು ಈ ವ್ಯವಸ್ಥೆಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಸುನಿಲ್ ಎಂ. ಉಡುಪ ಹೇಳಿದರು.

- ■ ವೈರ್‌ಲೆಸ್ ತಂತ್ರಜ್ಞಾನ ಬಳಕೆಯ ವಿಶ್ವದ ಮೊದಲ ಸಾಧನ
- ■ ಎಟಿಎಂ ಒಡೆಯಲು ಪ್ರಯತ್ನಿಸುತ್ತಿದ್ದಂತೆ ವಿಡಿಯೋ ಚಿತ್ರ ಸಹಿತ ಎಚ್ಚರಿಕೆ ಗಂಟೆ
- ■ ಕೇಂದ್ರ ಕಚೇರಿಯಿಂದ ಸ್ಥಳೀಯ ಪೊಲೀಸರಿಗೆ ಮಾಹಿತಿ ರವಾನೆ

### ಬೆಂಗಳೂರಿನ 363 ಕೇಂದ್ರಗಳಿಗೆ ಭದ್ರತೆ

**ಬೆಂಗಳೂರಿನ ನಾನಾ ಭಾಗಗಳಲ್ಲಿರುವ 363 ಎಟಿಎಂ ಕೇಂದ್ರಗಳು ಸೇರಿ ಕರ್ನಾಟಕದ 435 ಕೇಂದ್ರಗಳಿಗೆ ಆಕ್ಟೀವ್ ಡೆಟೆರೆನ್ಸ್ ಭದ್ರತೆ ಒದಗಿಸಲಾಗಿದೆ. ಒಟ್ಟಾರೆ ಭಾರತದಲ್ಲಿ 1,800 ಕೇಂದ್ರಗಳಿಗೆ ಭದ್ರತೆ ಒದಗಿಸಲಾಗಿದ್ದು, ಇನ್ನು 2 ಸಾವಿರ ಕೇಂದ್ರಗಳಿಗೆ ಈ ಭದ್ರತೆ ಕಲ್ಪಿಸಲು ಬೇಡಿಕೆ ಇದೆ ಎಂದು ಉಡುಪ ತಿಳಿಸಿದರು.**




ಮುಂಬೈನ ಸೆಕ್ಯುರೆನ್ಸ್ ಸಿಸ್ಟಮ್ಸ್ ಸಂಸ್ಥೆ ರೂಪಿಸಿರುವ ಎಟಿಎಂಗಳಿಗೆ ಭದ್ರತೆ ಕಲ್ಪಿಸುವ ನೂತನ ಸಾಧನವನ್ನು ಬೆಂಗಳೂರಿನಲ್ಲಿ ಮಂಗಳವಾರ ಬಿಡುಗಡೆ ಮಾಡಲಾಯಿತು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ಆರ್. ಉಡುಪ ಮತ್ತು ಸಿಇಒ ಶ್ರೀನಿವಾಸ್‌ಪೊಪುರಿ ಸಾಧನದ ಕಾರ್ಯದ ಬಗ್ಗೆ ವಿವರಣೆ ನೀಡಿದರು.

### ಸಾಧನ ಹೇಗೆ ಕಾರ್ಯನಿರ್ವಹಿಸುತ್ತದೆ?

ಎಟಿಎಂ ಕೇಂದ್ರದ ಹೊರಭಾಗ ಹಾಗೂ ಒಳಭಾಗದಲ್ಲಿ ಕ್ಯಾಮೆರಾ ಹಾಗೂ ಎಟಿಎಂ ಯಂತ್ರಗಳಿಗೆ ವಿವಿಧ ಬಗೆಯ ಸೆನ್ಸರ್‌ಗಳನ್ನು ಅಳವಡಿಸಲಾಗಿರುತ್ತದೆ. ಒಂದು ಸ್ಪೀಕರ್ ಹಾಗೂ ಒಂದು ಮೈಕ್ರೋಫೋನ್ ಸಹ ವ್ಯವಸ್ಥೆಗೊಳಿಸಲಾಗಿರುತ್ತದೆ. ಏಕಕಾಲಕ್ಕೆ ಇಬ್ಬರು ಎಟಿಎಂ ಕೇಂದ್ರ ಪ್ರವೇಶಿಸಿದರೆ ಅದನ್ನು ಗುರುತಿಸುವ ಮೋಷನ್ ಸೆನ್ಸರ್‌ಗಳು ಇದರಲ್ಲಿರುತ್ತವೆ.

ಈ ಎಲ್ಲ ಸೆನ್ಸರ್‌ಗಳನ್ನು ನಿಯಂತ್ರಿಸಲು ಎಟಿಎಂ ಯಂತ್ರದ ಹಿಂಬದಿಯ ಕೋಣೆಯಲ್ಲಿ ಪುಟ್ಟ ಪೆಟ್ಟಿಗೆಯನ್ನು ವ್ಯವಸ್ಥೆಗೊಳಿಸಿ, ಅದಕ್ಕೂ ಸೆನ್ಸರ್ ಅಳವಡಿಸಲಾಗಿರುತ್ತದೆ. ಇದನುನ ನವಿ ಮುಂಬೈನ ಮಹಾಪೆಯಲ್ಲಿರುವ ಕೇಂದ್ರ ಕಚೇರಿಯೊಂದಿಗೆ ವೈರ್‌ಲೆಸ್ ಜಾಲದ ಮೂಲಕ ಸಂಪರ್ಕ ಕಲ್ಪಿಸಲಾಗಿರುತ್ತದೆ.

ಎಟಿಎಂ ಕೇಂದ್ರದಲ್ಲಿ ಹಣ ಬಾರದಿದ್ದಾಗ ಗ್ರಾಹಕರು ಕೈಯಿಂದ ಅಥವಾ ಕಾಲಿನಿಂದ ಯಂತ್ರವನ್ನು ಒದ್ದರೆ ತಕ್ಷಣ ಸೈರನ್ ಮೊಳಗಲಾರಂಭಿಸುತ್ತದೆ. ಕೂಡಲೇ ಕೇಂದ್ರ ಕಚೇರಿಗೆ ಅಪಾಯದ ಸೂಚನೆ ರವಾನಿಸುತ್ತದೆ. ತಕ್ಷಣವೇ ಕೇಂದ್ರದಲ್ಲಿರುವ ವಿಡಿಯೋ ವ್ಯವಸ್ಥೆ ಜಾಗೃತಗೊಂಡು, ದೃಶ್ಯಗಳನ್ನೂ ರವಾನಿಸಲಾರಂಭಿಸುತ್ತದೆ. ಕೇಂದ್ರ ಕಚೇರಿಯಲ್ಲಿರುವ ಸಿಬ್ಬಂದಿ ದೃಶ್ಯಗಳನ್ನು ಗಮನಿಸಿ ಅಪಾಯದ ಸುಳಿವು ದೊರೆಯುತ್ತಲೇ ಅಪರಾಧದ ಬಗ್ಗೆ, ಅಪರಾಧಿಯ ಚಹರೆ, ಆತ ತೊಟ್ಟಿರುವ ಬಟ್ಟೆಯ ವಿವರಗಳ ಸಹಿತ ಸ್ಥಳೀಯ ಪೊಲೀಸರಿಗೆ ಮಾಹಿತಿ ರವಾನಿಸುತ್ತಾರೆ. ತಕ್ಷಣವೇ ಕಾರ್ಯಪ್ರವೃತ್ತರಾಗುವ ಪೊಲೀಸರು, ಅಪರಾಧಿಯನ್ನು ಬಂಧಿಸಬಹುದಾಗಿದೆ.